ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 270
ಸದಸ್ಯರ ಹೆಸರು ಶ್ರೀ ಎಸ್.ಎಲ್.ಬೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ: 09.12.2020
ಉತ್ತರಿಸುವ ಸಚಿವರು: ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ಉಡುಪಿ ಜಿಲ್ಲೆಯಲ್ಲಿರುವ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ರಸ್ತೆಗಳು ಯಾವುವು. ಅವುಗಳ ಉದ್ದವೆಷ್ಟು? (ರಸ್ತೆ ಮತ್ತು ಕಿಲೋಮೀಟರ್‌ಗಳ ವಿವರ ನೀಡುವುದು)</td><td>ಉಡುಪಿ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿಯ ಜಿಲ್ಲಾ ಮುಖ್ಯ ರಸ್ತೆ, ರಾಜ್ಯ ಹೆದ್ದಾರಿ ಹಾಗೂ ರಾಷ್ಟ್ರೀಯ ಹೆದ್ದಾರಿ ಸೇರಿ ಒಟ್ಟು 1285.59 ಕಿ.ಮೀ. ಉದ್ದದ ರಸ್ತೆಯ ಸಂಪರ್ಕ ಜಾಲವಿದ್ದು, ಅವುಗಳ ವಿವರಗಳು ಈ ಕೆಳಗಿನಂತಿರುತ್ತದೆ:
<table>
<tr><th>ವರ್ಗ</th><th>ರಸ್ತೆಯ ಉದ್ದ (ಕಿ.ಮೀ.ಗಳಲ್ಲಿ)</th></tr>
<tr><td>ಜಿಲ್ಲಾ ಮುಖ್ಯ ರಸ್ತೆ</td><td>791.88</td></tr>
<tr><td>ರಾಜ್ಯ ಹೆದ್ದಾರಿ</td><td>260.31</td></tr>
<tr><td>ರಾಷ್ಟ್ರೀಯ ಹೆದ್ದಾರಿ</td><td>233.4</td></tr>
</table></td></tr>
<tr><td>ಆ)</td><td>ಈ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯ ರಸ್ತೆಗಳೆಂದು ಘೋಷಣೆ ಮಾಡಲಾಗಿದ್ದು ಯಾವಾಗ (ಘೋಷಣೆಯ ಪ್ರತಿಯನ್ನು ಒದಗಿಸುವುದು)</td><td>ಜಿಲ್ಲೆಯಲ್ಲಿರುವ ಒಟ್ಟು 1285.59 ಕಿ.ಮೀ. ಉದ್ದದ ರಸ್ತೆಯ ಸಂಪರ್ಕ ಜಾಲವಿದ್ದು, ಇದರಲ್ಲಿ ಗ್ರಾಮೀಣ ರಸ್ತೆಯಿಂದ ಜಿಲ್ಲಾ ಮುಖ್ಯ ರಸ್ತೆಯನ್ನಾಗಿ, ಜಿಲ್ಲಾ ಮುಖ್ಯ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಮತ್ತು ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಕಾಲಕಾಲಕ್ಕೆ ಮೇಲ್ದರ್ಜೆಗೇರಿಸಿ, ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.</td></tr>
<tr><td>ಇ)</td><td>ಲೋಕೋಪಯೋಗಿ ರಸ್ತೆಗಳ ನಿಗದಿಪಡಿಸಲಾದ ಗಡಿರೇಖೆ, ಕಟ್ಟಡ ರೇಖೆ, ಮತ್ತು ನಿಯಂತ್ರಣ ರೇಖೆಗಳು ಯಾವುವು. (ಆದೇಶದ ಪ್ರತಿ ಒದಗಿಸುವುದು)</td><td>ಲೋಕೋಪಯೋಗಿ ರಸ್ತೆಗಳ ಗಡಿ ರೇಖೆ, ಕಟ್ಟಡ ರೇಖೆ ಮತ್ತು ನಿಯಂತ್ರಣ ರೇಖೆಗಳನ್ನು 'ಕರ್ನಾಟಕ ಹೆದ್ದಾರಿ ಕಾಯ್ದೆ' ರನ್ವಯ ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ 23 ಆರ್‌ಡಿಎಫ್ 2004 ದಿನಾಂಕ:18.10.2004 ರಲ್ಲಿ ಈ ಕೆಳಗಿನಂತೆ ನಿಗದಿಪಡಿಸಲಾಗಿರುತ್ತದೆ. (ಪತ್ರದ ಪ್ರತಿ ನೀಡಲಾಗಿದೆ)
<table>
<tr><th></th><th>ರಾಜ್ಯ ಹೆದ್ದಾರಿಯ ದಾಖಲಿತ ರಸ್ತೆ ಭೂಗಡಿಯ ಅಂಚಿನಿಂದ</th></tr>
<tr><td>ಎ). ಸಿಟಿ ಕಾರ್ಪೊರೇಷನ್ ಪರಿಮಿತಿ: ಸಿಟಿ ಮುನಿಸಿಪಲ್ ಕೌನ್ಸಿಲ್ ಪರಿಮಿತಿ :ಟೌನ್ ಮುನಿಸಿಪಲ್ ಕೌನ್ಸಿಲ್ ಪರಿಮಿತಿ:ಟೌನ್ ಪಂಚಾಯತಿ</td><td>6 ಮೀಟರ್</td></tr>
<tr><td>ಬಿ) ಸಿಟಿ ಕಾರ್ಪೊರೇಷನ್ ಪರಿಮಿತಿಯಿಂದ 15 ಕಿಮೀ ದೂರದವರೆಗೆ</td><td>12 ಮೀಟರ್</td></tr>
<tr><td>ಸಿ) ಸಿಟಿ ಮುನಿಸಿಪಲ್ ಕೌನ್ಸಿಲ್ ಪರಿಮಿತಿಯಿಂದ 10 ಕಿಮೀ ದೂರದವರೆಗೆ</td><td>12 ಮೀಟರ್</td></tr>
<tr><td>ಡಿ) ಟೌನ್ ಮುನಿಸಿಪಲ್ ಕೌನ್ಸಿಲ್ ಪರಿಮಿತಿ:ಟೌನ್ ಪಂಚಾಯುತ್ ಪರಿಮಿತಿ:ಗ್ರಾಮ ಪಂಚಾಯತ್ ಪರಿಮಿತಿಯಿಂದ 5 ಕಿಮೀ ದೂರದವರೆಗೆ</td><td>12 ಮೀಟರ್</td></tr>
</table></td></tr>
</table>

(೨)

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಈ)	ಈ ಕಟ್ಟಡ ರೇಖೆಗಳು ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿ, ಗ್ರಾಮ ಪಂಚಾಯತಿ ಪರಿಮಿತಿಯಲ್ಲಿ ಹಾಗೂ ಮಹಾನಗರ ಪಾಲಿಕೆಯಿಂದ 15 ಕಿಮೀ. ಪರಿಮಿತಿಯಲ್ಲಿ ವ್ಯತ್ಯಾಸವಿರಲು ಕಾರಣವೇನು?	ಲೋಕೋಪಯೋಗಿ ಇಲಾಖೆಯ ರಸ್ತೆಗಳ ಕಟ್ಟಡ ರೇಖೆಯನ್ನು ಮಹಾನಗರ ಪಾಲಿಕೆ. ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ಗ್ರಾಮಪಂಚಾಯಿತಿ ಪರಿಮಿತಿಯಲ್ಲಿ ಹಾಗೂ ಮಹಾನಗರ ಪಾಲಿಕೆಯಿಂದ 15 ಕಿ.ಮೀ. ಪರಿಮಿತಿಯಲ್ಲಿ ಆಯಾ ಪ್ರಾಧಿಕಾರದಲ್ಲಿ ಬೇರೆ ಬೇರೆಯಾಗಿರಲು ಕಾರಣವೇನೆಂದರೆ ಸದರಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಜನಸಾಂಧ್ರತೆ, ಸ್ಥಳವಕಾಶದ ಲಭ್ಯತೆ ಮತ್ತು ಪ್ರಾಧಿಕಾರದ ಭವಿಷ್ಯತ್ತಿನ ಬೆಳೆವಣಿಗೆ ದೃಷ್ಟಿಯಿಂದ ಬೇರೆ ಬೇರೆ ಪರಿಮಿತಿಯನ್ನು ಐ.ಆರ್.ಸಿ. ಮಾನದಂಡಕ್ಕನುಗುಣವಾಗಿ ನಿಗದಿಪಡಿಸಲಾಗಿರುತ್ತದೆ.

ಲೋಇ 113 ಸಿಕ್ಯೂಎನ್ 2020(ಇ)

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು,
ಲೋಕೋಪಯೋಗಿ ಇಲಾಖೆ

- CR /KA/BG-GPO/13/2003-2005

(1)

ವಿಶ್ವಮಾನವ ವರ್ಷ

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೩೯	ಬೆಂಗಳೂರು, ಗುರುವಾರ, ನವೆಂಬರ್ ೦೪, ೨೦೦೪ (ಕಾರ್ತಿಕ ೧೩, ಶಕ ವರ್ಷ ೧೯೨೬)	ಸಂಚಿಕೆ ೪೪

ಭಾಗ – ೪ –ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.

ಲೋಕೋಪಯೋಗಿ ಸಚಿವಾಲಯ

ಪ್ರಕಟಣೆ ಸಂಖ್ಯೆ: ಪಿಡಬ್ಲ್ಯೂಡಿ 23 ಆರ್‌ಡಿಎಫ್ 2004, ಬೆಂಗಳೂರು, ದಿನಾಂಕ: 18ನೇ ಅಕ್ಟೋಬರ್ 2004

ವಿಷಯ: "ಕರ್ನಾಟಕ ಹೆದ್ದಾರಿ ಕಾಯ್ದೆ 1964"ರ ಅಧಿನಿಯಮ 7(1)ರಂತೆ ರಾಜ್ಯ ಹೆದ್ದಾರಿಗಳು ಹಾಯ್ದು ಹೋಗುವ ನಗರ : ಪಟ್ಟಣ: ಗ್ರಾಮಗಳ ಪರಿಮಿತಿ ಹಾಗೂ ಇತರ ಅಕ್ಷೇಪಿತ ಪ್ರದೇಶಗಳ ವ್ಯಾಪ್ತಿಯಲ್ಲಿ ನಿಗದಿಪಡಿಸಿದ್ದ ಹೆದ್ದಾರಿ ಗಡಿ ಮತ್ತು ಕಟ್ಟಡರೇಖೆಗಳನ್ನು ಮಾರ್ಪಡಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ರಾಜ್ಯಪತ್ರದಲ್ಲಿನ ಪ್ರಕಟಣೆ ಸಂಖ್ಯೆ ಪಿಡಬ್ಲ್ಯೂಡಿ 44 ಸಿಆರ್‌ಎಂ 99 ದಿನಾಂಕ 18ನೇ ನವೆಂಬರ್ 2002.

"ಕರ್ನಾಟಕ ಹೆದ್ದಾರಿ ಕಾಯ್ದೆ 1964"ರ ಅಧಿನಿಯಮ 7(1)ರ ಪ್ರಕಾರ ನಗರ: ಪಟ್ಟಣ: ಗ್ರಾಮಗಳ ಪರಿಮಿತಿ ಹಾಗೂ ಇತರ ಅಕ್ಷೇಪಿತ ಪ್ರದೇಶಗಳಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ರಾಜ್ಯ ಹೆದ್ದಾರಿಗಳಿಗೆ ಗಡಿ ರೇಖೆ ಮತ್ತು ಕಟ್ಟಡ ರೇಖೆಗಳನ್ನು ನಿಗದಿಪಡಿಸಿ ದಿನಾಂಕ 18-11-2002ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿತ್ತು.

ಆದರೆ ಸದರಿ ಪ್ರಕಟಣೆಯಲ್ಲಿ ನಿಗದಿಪಡಿಸಿದ್ದ ಪರಿಮಿತಿಯ ಅಂತರದೊಳಗಿನ ಕಡಿಮೆ ಅಂತರದಲ್ಲಿ ಹಲವು ಪಟ್ಟಣ/ಗ್ರಾಮಗಳು ಬರುತ್ತಿದ್ದು, ಈ ಪರಿಮಿತಿಗಳು ಒಂದರೊಳಗೊಂದು ಬರುವುದರಿಂದ ಇವನ್ನು ಜಾರಿಗೊಳಿಸುವಲ್ಲಿ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದರಿಂದಾಗಿ ಕಾಯ್ದೆಯ ಅನುಷ್ಠಾನದ ಮೂಲ ಉದ್ದೇಶವೇ ವಿಫಲವಾಗುವುದನ್ನು ಸರ್ಕಾರ ಮನಗಂಡು, ಈ ಹಿಂದೆ ನಿಗದಿಪಡಿಸಲಾಗಿದ್ದ ರಾಜ್ಯ ಹೆದ್ದಾರಿಗಳ ಕಟ್ಟಡ ರೇಖೆಯ ಅಂತರವನ್ನು ಕೆಳಕಂಡಂತೆ ಪರಿಷ್ಕರಿಸಲು ಸರ್ಕಾರ ತೀರ್ಮಾನಿಸಿರುತ್ತದೆ.

	ರಾಜ್ಯ ಹೆದ್ದಾರಿಯ ದಾಖಲಿತ ರಸ್ತೆ ಭೂ ಗಡಿಯ ಅಂಚಿನಿಂದ
1. ಸಿಟಿ ಕಾರ್ಪೊರೇಷನ್ ಪರಿಮಿತಿ: ಸಿಟಿ ಮುನ್ಸಿಪಲ್ ಕೌನ್ಸಿಲ್ ಪರಿಮಿತಿ: ಟೌನ್ ಮುನ್ಸಿಪಲ್ ಕೌನ್ಸಿಲ್ ಪರಿಮಿತಿ: ಟೌನ್ ಪಂಚಾಯಿತಿ ಪರಿಮಿತಿ: ಗ್ರಾಮ ಪಂಚಾಯಿತಿ ಪರಿಮಿತಿಯಲ್ಲಿ	6 ಮೀಟರ್
2. ಸಿಟಿ ಕಾರ್ಪೊರೇಷನ್ ಪರಿಮಿತಿಯಿಂದ 15.00 ಕಿಮೀ ದೂರದವರೆಗೆ	12 ಮೀಟರ್

ಮೇಲೆ ತಿಳಿಸಿದ ಪ್ರದೇಶಗಳನ್ನು ಹೊರತುಪಡಿಸಿ ಉಳಿದ ಅಕ್ಷೇಪಿತ ಪ್ರದೇಶಗಳಲ್ಲಿ ಹೆದ್ದಾರಿ ಕಾಯ್ದೆಯ ಅಧಿನಿಯಮ 7(1)ರನ್ವಯ ಹೊರಡಿಸಲಾದ ಪ್ರಕಟಣೆಯಲ್ಲಿ ನಿಗದಿಪಡಿಸಿರುವ ಗಡಿರೇಖೆ, ಕಟ್ಟಡ ರೇಖೆ ಮತ್ತು ನಿಯಂತ್ರಣ ರೇಖೆಗಳು ಅನ್ವಯವಾಗುತ್ತವೆ.